ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/35/ಎಲ್‌ಆರ್‌ಡಿಸಿ/ಎನ್‌ಬಿಎ/2014-15 /6846

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ: 29.02.2016

## ಸುತ್ತೋಲೆ

ವಿಷಯ: ಮಾನ್ಯತೆ ಪಡೆಯುವ ಸಂಬಂಧ ಸ್ವಯಂ ಮೌಲ್ಯಮಾಪನ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಡಿಟಿಇ/35/ಎಲ್‌ಆರ್‌ಡಿಇ/ಎನ್‌ಬಿಎ/2014-15, ದಿ: 25-01-2016

*****

ಮೇಲ್ಕಂಡ ವಿಷಯಕ್ಕೆ ಹಾಗು ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಜ್ಯದ ಸರ್ಕಾರಿ ಪಾಲಿಟೆಕ್ನಿಗಳ ಎಲ್ಲಾ ಪ್ರಾಂಶುಪಾಲರು ತಮ್ಮ ಸಂಸ್ಥೆಯಲ್ಲಿ ಯಾವ ಪ್ರೋಗ್ರಾಂಗಳಿಗೆ ಮಾನ್ಯತೆಯನ್ನು ಪಡೆಯಬಹುದೋ ಆ ಪ್ರೊಗ್ರಾಂಗಳಿಗೆ ಸ್ವಯಂ ಮೌಲ್ಯಮಾಪನ ವರದಿಯನ್ನು ತಮ್ಮ ಹಂತದಲ್ಲಿಯೇ ಭರ್ತಿ ಮಾಡಿ ಹಾಗೂ ವಿಶ್ಲೇಷಿಸಿ, ಸ್ಪಷ್ಟ ಅಭಿಪ್ರಾಯವನ್ನು ದಿ: 29.02.2016 ರೊಳಗಾಗಿ ತುಂಬಿದ SAR ನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿತ್ತು. ಮುಂದುವರೆದು, ಅನೇಕ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಯ ಚುನಾವಣೆ ಕಾರ್ಯದ ನಿಮಿತ್ತ ಈ ದಿನಾಂಕವನ್ನು ವಿಸ್ತರಿಸಲು ಕೋರಿರುತ್ತಾರೆ. ಆದ್ದರಿಂದ ಭರ್ತಿ ಮಾಡಿದ ಸ್ವಯಂ ಮೌಲ್ಯಮಾಪನ ವರದಿಯನ್ನು ದಿ:31.03.2016 ರೊಳಗಾಗಿ ನಿರ್ದೇಶನಾಲಯಕ್ಕೆ dtenba@gmail.com ಮೂಲಕ ಸಲ್ಲಿಸಲು ಸೂಚಿಸಲಾಗಿದೆ.

ನಿರ್ದೇಶಕರು
29/2/16

ಇವರಿಗೆ,

1 ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳ ಮುಂದಿನ ಸೂಕ್ತ ಕ್ರಮಕ್ಕಾಗಿ
2 ಇ-ಆಡಳಿತ ವಿಭಾಗದ ಸಂಯೋಜಕರ ಸೂಕ್ತ ಕ್ರಮಕ್ಕಾಗಿ
3 ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.